ನಿತ್ಯಾನಂದ: ಆಸ್ಪತ್ರೆಗಳಲ್ಲಿ ಆಕ್ಸಿಜನ್ ಸಿಗುತ್ತಿಲ್ಲ.

ಸತ್ಯಾನಂದ: ಆಸ್ಪತ್ರೆ ಕಟ್ಟಿಸಿದವರಿಗೆ ಕಾಮನ್ ಸೆನ್ಸ್ ಇಲ್ಲ. ಮರಗಿಡಗಳು ಹೇರಳವಾಗಿ ಇರೊ ಕಡೆ ಆಸ್ಪತ್ರೆ ಕಟ್ಟಿಸ್ಬೇಕಿತ್ತು ಅಲ್ವಾ?

***

ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಾ ರಂಗ ಕಲಾವಿದ 'ನನಗೆ ನಾಟಕವೆ ಜೀವನ'

ಸಭಿಕ: ನಮಗೆ ಜೀವನವೆ ನಾಟಕ

***

ಸುಧಾಕರ ಮತ್ತು ದಿವಾಕರ ಒಂದು ಮನೆಯಲ್ಲಿ ಹಣ ಕಳ್ಳತನ ಮಾಡಿದರು. ಸಮನಾಗಿ ಹಂಚಿಕೊಂಡರು.

ಸುಧಾಕರ: ಅಪ್ಪಿತಪ್ಪಿಯೂ ಎಲ್ಲಿಯೂ ಯಾವುದೇ ಕಾರಣಕ್ಕೂ ಬಾಯಿ ಬಿಡಬೇಡ.

ದಿವಾಕರ: ಊಟ ಮಾಡ್ಬೇಕಾದ್ರೆ?

***

ಗಂಡ: ಮಗ ಗಣಿತದಲ್ಲಿ ಒಂದೇ ಒಂದು ಮಾರ್ಕ್ ತಗೊಂಡವ್ನೆ


ಹೆಂಡತಿ: ಆಗಾಗ ನೀವೇ ಹೇಳ್ತಾ ಇರ್ತಿರಲ್ಲಾ ಮೊದಲ ಹೆಜ್ಜೆಯಿಂದ ಆರಂಭಿಸಬೇಕು ಅಂತ!

***

ವೇದಿಕೆಯಲ್ಲಿ ವೀರಾವೇಶದಿಂದ ಭಾಷಣ ಮಾಡುತ್ತಾ ರಾಯರು 'ಕರ್ನಾಟಕ ನಮ್ಮ ಸಂಪತ್ತು'

ತಕ್ಷಣ ಎದ್ದು ನಿಂತ ಮರಿರಾಯರು 'ನಮ್ಮ ಪಾಲು ಯಾವಾಗ ಕೊಡ್ತೀರಾ'?

***




ಪ್ರತಿದಿನ ಕಚೇರಿಗೆ ತಡವಾಗಿ ಬರುತ್ತಿದ್ದ ಮಹದೇವ್‌ಗೆ ಮ್ಯಾನೇಜರ್ 'ವ್ಯಕ್ತಿಗೆ ತೂಕ ಇರಬೇಕು.

ಮಹದೇವ್: ನಮ್ಮ ಶ್ರೀಮತಿಯವರು ಬಹಳ ತೂಕ ಅವ್ರೆ, ಅವರನ್ನೆ ಡ್ಯೂಟಿಗೆ ತಗೊಳ್ಳಿ ಸಾರ್!

ಪರಿಸರ ಸಂರಕ್ಷಣೆಯ ಬಗ್ಗೆ ಉಪನ್ಯಾಸ ಮಾಡುತ್ತಾ ಜನಾರ್ಧನ 'ನಮಗಿರುವುದು ಒಂದೇ ಭೂಮಿ'

ಎದ್ದು ನಿಂತ ಯುವಕ ನಿಮ್ಮ ಕಾಲಕ್ಕೆ ಒಂದೇ ಭೂಮಿ. ಮುಂದೆ ನಾವು ಚಂದ್ರ, ಬುಧ, ಶುಕ್ರ, ಮಂಗಳ ಅಂಗಳಗಳಿಗೂ ಹೋಗಲಿದ್ದೇವೆ.

***

ಜನಗಣತಿಗೆ ತೇಜಸ್ವಿನಿಯವರ ಮನೆಗೆ ಬಂದ ಶಿಕ್ಷಕ ನಾಗರಾಜ್ ಮಕ್ಕಳೆಷ್ಟು ಎಂದು ಕೇಳಿದರು?

ತೇಜಸ್ವಿನಿ: ಆಕಾಶವಾಣಿ

ನಾಗರಾಜ್: ಮಕ್ಕಳೆಷ್ಟಮ್ಮ

ತೇಜಸ್ವಿನಿ: ಸಾರ್ ಮಗ ಆಕಾಶ, ಮಗಳು ವಾಣಿ

***

ಮೇಷ್ಟ್ರು: ಅಡಕತ್ತರಿ ಪದವನ್ನು ನಿಮ್ಮದೆ ವಾಕ್ಯದಲ್ಲಿ ಪ್ರಯೋಗಿಸಿ.

ವಿದ್ಯಾರ್ಥಿ: ಕತ್ತರಿ ಅಡವಿಡುವ ಗತಿ ಶತ್ರುವಿಗೂ ಬರಬಾರದು.

***

ಶ್ಯಾಮ್: ಯಾವ ಹೆಣ್ಣು ನಿನಗೆ ಸೆಟ್ ಆಗ್ತಾ ಇಲ್ಲ ಯಾಕೆ?

ಸೋಮು: ಮೊದ್ಲೆ ಸೆಟ್ ಮಾಡ್ಕೊಂಡಿರ್ತಾರೆ.

ಶ್ಯಾಮ್: ಮತ್ತೆ ಗಂಡುಗಳ ಯಾಕೆ ನೋಡ್ತಾರೆ.

ಸೋಮು: ಸೆಟ್ ಆಗಿರೋರ್ಗಿಂತ ಒಳ್ಳೇರ್ ಸಿಕ್ತಾರೇನೊ ಅಂತ.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ

ಟೀಚರ್: ಇಂದಿನ ಹಾಗೂ ಹಿಂದಿನ ಕಾಲದ ಮಹಿಳೆಯರ ಬಗ್ಗೆ ವ್ಯತ್ಯಾಸವೇನು?

ವಿದ್ಯಾರ್ಥಿ: ಅಂದು 'ಒಲಿದರೆ ನಾರಿ ಮುನಿದರೆ ಮಾರಿ'. ಇಂದು 'ಒಲಿದರೆ ಲೇಡಿ, ಮುನಿದರೆ ಸೀಡಿ'.

***

ಮದುವೆ ಮನೆಯಲ್ಲಿ ಪುರೋಹಿತರು ಮದುಮಗನನ್ನು ಬೇಗ ಕರೆದುಕೊಂಡು ಬನ್ನಿ. ಮುಹೂರ್ತ ಮೀರುತ್ತಿದೆ.

ಪುರೋಹಿತರೇ, ಐವತ್ತು ಜನಕ್ಕಿಂತ ಒಬ್ಬ ಜಾಸ್ತಿ ಇದ್ದಾನೆ ಎಂದು ಪೊಲೀಸನವರು ಮದುವೆ ಗಂಡನನ್ನೇ ಕರೆದುಕೊಂಡು ಹೋದರು ಎಂದು ವಧುವಿನ ಪೋಷಕರು ರೋಧಿಸುತ್ತೀದ್ದಾರೆ.

***

ಮದುವೆ ಎಂಬ ವಿಷಯದ ಕುರಿತು ಪ್ರೊಫೆಸರ್ ಒಬ್ಬರು ವಿದ್ಯಾರ್ಥಿಯನ್ನು ಕೇಳಿದರು.

ಪ್ರೊಫೆಸರ್: ನಿನಗೆ ಎಂಥ ಹೆಂಡತಿ ಬೇಕು.

ವಿದ್ಯಾರ್ಥಿ: ಚಂದ್ರನಂತಹ ಹೆಂಡತಿ ಬೇಕು.

ಪ್ರೊಫೆಸರ್: ಆಹಾ, ಎಂತಹ ಆಯ್ಕೆ. ಅಂದರೆ, ಅವಳು ಕೂಲಾಗಿ, ಕಾಮಾಗಿ ಇರಬೇಕು?

ವಿದ್ಯಾರ್ಥಿ: ಇಲ್ಲ ಇಲ್ಲ...

ಪ್ರೊಫೆಸರ್: ಗುಂಡಗೆ, ಬೆಳ್ಳಗೆ ಇರಬೇಕಲ್ಲವೇ?

ವಿದ್ಯಾರ್ಥಿ: ಹಾಗೂ ಅಲ್ಲ.

ಪ್ರೊಫೆಸರ್: ಸಿಟ್ಟಿನಿಂದ ಇನ್ ಹ್ಯಾಗಿರಬೇಕು?

ವಿದ್ಯಾರ್ಥಿ: ನನ್ನ ಹೆಂಡತಿ ಚಂದ್ರನ ತರಹ ಇದ್ದು, ಪ್ರತಿ ರಾತ್ರಿ ಬಂದು, ಬೆಳಿಗ್ಗೆ ಅದೃಶ್ಯಳಾಗಬೇಕು.

***

ರಂಗ: ನಿಮ್ಮ ಕಡೆ ಕೊರೊನಾ ಹಾವಳಿ ಹೆಂಗಿದೆ?

ಸಿಂಗ: ಟೀವಿ ಹಾಕಿದ್ರೆ ಇದೆ. ಇಲ್ಲಾಂದ್ರೆ ಎಲ್ಲರೂ ಆರೋಗ್ಯವಾಗಿ, ನೆಮ್ಮದಿಯಾಗಿ ಇದ್ದಾರೆ.

***

ದೆಹಲಿಯ ಲೇಡಿಸ್ ಹಾಸ್ಟೆಲಿನ ಮುಂದೆ ತರಕಾರಿ ಮಾರುವವನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ ಎಂದು ಮಂಕ ವೆಂಕನಿಗೆ ಹೇಳಿದ.

ವೆಂಕ ಅದ್ಯಾಕೆ ಎಂದು ಕೇಳಿದ್ದಕ್ಕೆ, ಮಂಕ, ತರಕಾರಿಯನ್ನು ಹಾಸ್ಟೆಲಿನ ಮುಂದೆ ಕ್ಯಾ ರೇಟ್ ಅಂತ ಕೂಗುತ್ತಿದ್ದನಂತೆ.

***

ಬ್ಯಾಂಕ್ ಮ್ಯಾನೇಜರ್ ಕುಟುಂಬದೊಂದಿಗೆ ಹೋಟೆಲ್‌ಗೆ ಹೋದ.

ಮ್ಯಾನೇಜರ್; ಮೆನು ಏನೇನು ಇದೆ.

ವೇಟರ್: ಪಾಲಾಕ್ ಪನ್ನೀರ್, ದಾಲ್ ರೋಟಿ, ಬಿರಿಯಾನಿ, ಚಿಕನ್ 65...

ಮ್ಯಾನೇಜರ್: ಪಾಲಾಕ್ ಪನ್ನೀರ್, ತಂದೂರಿ ರೋಟಿ ಕೊಡು. ಮತ್ತೇನಿದೆ?

ವೇಟರ್: ಗೋಬಿ 65, ಗೋಬಿ ಮಂಚೂರಿ.

ಮ್ಯಾನೇಜರ್: ಎಲ್ಲವನ್ನೂ ಆರ್ಡರ್ ಮಾಡಿ ಬೇಗ ತಂದುಕೊಡುವಂತೆ ಹೇಳಿದ.

ವೇಟರ್: ಎಲ್ಲ ಖಾಲಿಯಾಗಿದೆ. ಏನೂ ಇಲ್ಲ.

ಮ್ಯಾನೇಜರ್: ಏನೂ ಇಲ್ಲಾಂದ್ರೆ, ಮತ್ಯಾಕೆ ಇನ್ನೇನು ಬೇಕು ಅಂತ ಕೇಳಿದೆ.ಮೊದಲೇ ಹೇಳಬಹುದಿತ್ತಲ್ಲಾ....

ವೇಟರ್: ಸಾರ್, ನಾನು ದಿನಾಲು ಎಟಿಎಂಗೆ ಹೋಗ್ತೀನಿ, ಎಟಿಎಂ ನನಗೆ, ಪಿನ್ ಕೋಡ್, ಸೇವಿಂಗ್ಸ್/ಕರೆಂಟ್ ಅಕೌಂಟ್, ರಸೀತಿ ಎಲ್ಲಾ ಕೇಳುತ್ತೆ. ಆಮೇಲೆ ಕೊನೆಯಲ್ಲಿ ನೋ ಕ್ಯಾಶ್ ಅಂತ ಬರುತ್ತೆ. ಈಗ ಅರ್ಥವಾಯಿತಾ? ನನಗೆ ಆಗ ಹೇಗೆ ಅನಿಸುತ್ತೆ ಅಂತ ಅಂದ.

***

ಬಸ್‌ಗಳಲ್ಲಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಅಂತ ಮೀಸಲಿರುವ ಸೀಟು ಇರುತ್ತಲ್ಲ. ಮದುವೆಯಾದ ಗಂಡಸರು ಕೂತ್ಕೋಬಹುದೇ ಕೇಳಿದನೊಬ್ಬ ಭೂಪ.

***

ಕೃಷಿ ವಿಧೇಯಕ ಮೂರು ಕಾನೂನು ಜಾರಿಗೆ ತರಬಾರದೆಂದು ಚಳವಳಿ ನೆಡೆಸುತ್ತಿರುವ ರೈತರು ಮೂಲೆ ಗುಂಪಾಗಿದ್ದ ಸಂತನನ್ನು ಪತ್ರಿಕಾ ಮಿತ್ರರು ಪ್ರಶ್ನಿಸಿದರು.

ಮಾಧ್ಯಮ: ನೀವು ಏಕೆ ಚಳವಳಿ ಮಾಡುತ್ತಿದ್ದೀರಿ?

ಸಂತ: ಸರ್ಕಾರ ಈ ಮೂರು ಲಾ ಗಳನ್ನು ಕೈ ಬಿಡಬೇಕು.

ಮಾಧ್ಯಮ: ಅಂದರೆ ಇತ್ತೀಚೆಗೆ ಕಾರಣವಾಗಿರುವ ರೈತಪರ ಲಾ ಗಳನ್ನೇ?

ಸಂತ: ಇಲ್ಲಾ, ಮದರ್ ಇನ್ಲಾ, ಫಾದರ್ ಇನ್ಲಾ, ಬ್ರದರ್ ಇನ್ಲಾ.

ಮಾಧ್ಯಮ: ಹಾಗಾದರೆ ಯಾವ ಲಾ ಇರ್ಬೇಕು.

ಸಂತ: ಓನ್ಲೀ ಸಿಸ್ಟರ್ ಇನ್ಲಾ...

ಸಂಗ್ರಹ: ಶಿವಮೊಗ್ಗ ರಮೇಶ್, ಮೈಸೂರು